# ಎಂಟನೆಯ ತರಗತಿ (ದ್ವಿತೀಯ ಭಾಷೆ ಕನ್ನಡ)

ಗೌರವಾನ್ವಿತ ಶಿಕ್ಷಕ ಬಾಂಧವರೆ,

ಸೇತುಬಂಧ ಕಾರ್ಯಕ್ರಮವು ಶಿಕ್ಷಕರಿಗೆ ಚಿರಪರಿಚಿತವಾಗಿದ್ದರೂ ಈ ಸಾಲಿನ ಸೇತುಬಂಧ ನವೀನ ಹಾಗೂ ಸವಾಲಿನಿಂದ ಕೂಡಿದೆ. ಕೋವಿಡ್-19ರ ಹಿನ್ನೆಲೆಯಲ್ಲಿ ಕಳೆದ ಎರಡು ವರ್ಷಗಳಿಂದ ಶಾಲೆಗಳು ಸಮರ್ಪಕವಾಗಿ ನಡೆದಿಲ್ಲವಾದ ಕಾರಣ ಈ ಸಾಲಿನ ಶೈಕ್ಷಣಿಕ ವರ್ಷದ ಸೇತುಬಂಧ ಕಾರ್ಯಕ್ರಮವು ಶಿಕ್ಷಕರಾದ ನಮಗೆ ಸವಾಲಾಗಿದೆ. ವಿದ್ಯಾರ್ಥಿಗಳು ಆಯಾ ತರಗತಿಯಲ್ಲಿ ಗಳಿಸಬೇಕಾದ ಸಾಮರ್ಥ್ಯವನ್ನು ಗಳಿಸಲು ಕಷ್ಟಸಾಧ್ಯವಾಗಿರುವುದರಿಂದ ಕಲಿಕಾ ಕೊರತೆ ಉಂಟಾಗಿರುತ್ತದೆ.ಇದನ್ನು ಸರಿದೂಗಿಸುವ ನಿಟ್ಟಿನಲ್ಲಿ ಈ ಸಾಹಿತ್ಯವು ಪೂರಕವಾಗಿರುತ್ತದೆ.

ಶಿಕ್ಷಕರು, ಸೇತುಬಂಧ ಸಾಹಿತ್ಯದಲ್ಲಿರುವ ಮೂವತ್ತು ದಿನಗಳ 'ಬಂಧ' ಸಾಹಿತ್ಯದಲ್ಲಿ ನೀಡಿರುವ ಸೂಚನೆಯಂತೆ ಚಟುವಟಿಕೆಗಳನ್ನು ನಡೆಸಿ ವಿದ್ಯಾರ್ಥಿಗಳನ್ನು ಸದರಿ ತರಗತಿಗೆ ಸಿದ್ಧಗೊಳಿಸಬೇಕು.

ಈ ಹಂತದ ಬೋಧನಾ ಕಲಿಕಾ ಪ್ರಕ್ರಿಯೆಯು ಶಿಶು ಕೇಂದ್ರಿತ, ಚಟುವಟಿಕೆ ಆಧಾರಿತ ಮತ್ತು ಸಂತಸದಾಯಕ ಕಲಿಕೆಗೆ ಒತ್ತು ನೀಡುವಂತಿರಬೇಕು. ಇದಕ್ಕಾಗಿ ಶಿಕ್ಷಕರು ಉತ್ತಮ ರೀತಿಯಲ್ಲಿ ಪೂರ್ವ ಸಿದ್ಧತೆ ಮಾಡಿಕೊಳ್ಳುವುದು ಅಗತ್ಯ ಮತ್ತು ಅತ್ಯಂತ ಅನಿವಾರ್ಯವಾಗಿದ್ದು ನಿಮ್ಮ ಸೃಜನಶೀಲತೆಗೆ ಪೂರ್ಣ ಅವಕಾಶವಿರುತ್ತದೆ.

- ಸೇತುಬಂಧ ಕಾರ್ಯಕ್ರಮದ ಈ ಸಾಹಿತ್ಯವನ್ನು ಶಿಕ್ಷಕರು ಓದಿ, ಅರ್ಥೈಸಿಕೊಳ್ಳುವುದು.
- ಇಲ್ಲಿನ ಚಟುವಟಿಕೆಗಳು ಕೇವಲ ಮಾದರಿಯಷ್ಟೆ. ಶಿಕ್ಷಕರು ವಿಭಿನ್ನವಾದ ರೀತಿಯಲ್ಲಿ ಸೃಜನಾತ್ಮಕವಾಗಿ ಚಟುವಟಿಕೆಗಳನ್ನು ರೂಪಿಸಿಕೊಳ್ಳುವುದು.
- ಎಂಟನೆಯ ತರಗತಿಯ ಈ ಸಾಹಿತ್ಯದಲ್ಲಿ ಆರು ಮತ್ತು ಏಳನೆಯ ತರಗತಿಯ ಅಪೇಕ್ಷಿತ ಕಲಿಕಾಫಲ ಹಾಗೂ ಕಲಿಕಾಂಶಗಳನ್ನು ಗಮನಿಸಿ ಚಟುವಟಿಕೆಗಳನ್ನು ರೂಪಿಸಲಾಗಿದೆ.
- ಈ ಸಾಹಿತ್ಯದಲ್ಲಿ ಅನೇಕ ಸಲಹಾತ್ಮಕ ಚಟುವಟಿಕೆಗಳನ್ನು ನೀಡಲಾಗಿದ್ದು ಶಿಕ್ಷಕರು ನಿರ್ವಹಿಸಬೇಕಾದ ಒಂದು ಚಟುವಟಿಕೆಯ ಬಗ್ಗೆ ವಿವರಣೆ ನೀಡಲಾಗಿದೆ. ಉಳಿದ ಚಟುವಟಿಕೆಗಳ ಹೆಸರುಗಳನ್ನು ಮಾತ್ರ ನೀಡಲಾಗಿದ್ದು ಶಿಕ್ಷಕರು ತಮಗೆ ಇಷ್ಟವಾದ ಚಟುವಟಿಕೆಗಳನ್ನು ಹೊಂದಾಣಿಕೆ ಮಾಡಿಕೊಳ್ಳಲು ತಿಳಿಸಿದೆ.

## ಸೇತುಬಂಧ ಸಾಹಿತ್ಯ

ತರಗತಿ : 8 ವಿಷಯ :ಕನ್ನಡ (ದ್ವಿತೀಯಭಾಷೆ)

| ದಿನ | ಅಪೇಕ್ಷಿತ ಕಲಿಕಾ ಫಲಗಳು | ಕಲಿಕಾಂಶಗಳು | ಸಲಹಾತ್ಮಕ ಚಟುವಟಿಕೆಗಳು | ಚಟುವಟಿಕೆ ನಿರ್ವಹಣೆಗೆ ಸೂಚನೆಗಳು |
|---|---|---|---|---|
| 1 | ನೀಡಿದ ನಿರ್ದೇಶನಗಳನ್ನು ಆಲಿಸಿ ಅರ್ಥಮಾಡಿಕೊಂಡು ಆಂಗಿಕವಾಗಿ ಪ್ರತಿಕ್ರಿಯಿಸುವರು | ನೀಡಿದ ಸೂಚನೆಗಳಿಗೆ ಅನುಸಾರವಾಗಿ ಪ್ರತಿಕ್ರಿಯಿಸುತ್ತಾರೆ | 1.1 ಆಲಿಸು -ಹೋಲಿಸು<br>1.2 ಕಿವಿಕೊಟ್ಟು ಕೇಳು-ಮನವಿಟ್ಟು ಹೇಳು<br>1.3 ಹೇಳಿದಂತೆ ಮಾಡು | 1.1 ರಥ, ಬಣ, ಕಣ, ಚಿನ್ನ ಹೀಗೆ ಶಿಕ್ಷಕರು ನಾಲ್ಕು ಪದಗಳನ್ನು ಹೇಳುವರು. ಮಕ್ಕಳಿಗೆ ಗಮನವಿಟ್ಟು ಆಲಿಸಲು ಹೇಳಿ. ನಂತರ ಇವುಗಳಲ್ಲಿ ಒತ್ತಕ್ಷರ ಪದ ಯಾವುದು ಎಂದು ಕೇಳಿದಾಗ ಮಕ್ಕಳು ಆಲಿಸಿದ ಪದಗಳನ್ನು ಗ್ರಹಿಸಿ ಉತ್ತರ ಹೇಳಿ. ಇದೇ ರೀತಿ ಚಟುವಟಿಕೆ ಮುಂದುವರೆಸಿ. ಇದೇ ಮಾದರಿಯಲ್ಲಿ ಸಜಾತಿ, ವಿಜಾತಿ ಒತ್ತಕ್ಷರ, ಅಲ್ಪಪ್ರಾಣ ಮಹಾಪ್ರಾಣ ಅಕ್ಷರ ಒಳಗೊಂಡ ಪದಗಳಿಗೆ ಈ ಚಟುವಟಿಕೆ ಮಾಡಿಸಿ<br>1.2 ಶಿಕ್ಷಕರು ಮಕ್ಕಳನ್ನು 3-5 ಅಡಿ ಅಂತರದಲ್ಲಿ ಸಾಲಾಗಿ ನಿಲ್ಲಿಸುವರು. ನಂತರ ಮೊದಲ ಮಗುವಿನ ಕಿವಿಯಲ್ಲಿ ಪಿಸುಮಾತಿನಲ್ಲಿ ''ಹಸಿರು ಪರಿಸರದಲ್ಲಿ ನಮ್ಮ ಉಸಿರಿದೆ" ವಾಕ್ಯ ಹೇಳಿ ಮುಂದಿನವನ ಕಿವಿಯಲ್ಲಿ ಹೇಳುವಂತೆ ಸೂಚಿಸುವರು. ಹೀಗೆ ಕೊನೆಯ ವಿದ್ಯಾರ್ಥಿಯವರೆಗೆ ಈ ಚಟುವಟಿಕೆ ಮುಂದುವರೆಯುವುದು. ಕೊನೆಯ ವಿದ್ಯಾರ್ಥಿಯು ತಾನು ಕೇಳಿದ ವಾಕ್ಯವನ್ನು ಜೋರಾಗಿ ಹೇಳುವಂತೆ ಹೇಳುವುದು<br>1.3 ಪುಸ್ತಕ ತೆರೆ, ನೇರವಾಗಿ ಕುಳಿತುಕೊಳ್ಳಿ, ನಿರ್ದಿಷ್ಟ ಪಾಠದಲ್ಲಿ ಮೂರು ಅಕ್ಷರದ ಪದ ಗುರುತಿಸು, ನಾಮಪದ ಹೇಳು ಹೀಗೆ ಸೂಚನೆಗಳನ್ನು ನೀಡಿ ಮಕ್ಕಳನ್ನು ಚಟುವಟಿಕೆಯಲ್ಲಿ ತೊಡಗಿಸಿ |
| 2 | | ನೀಡಿದ | 2.1 ಆಲಿಸು- ಆಲೋಚಿಸು | 2.1 ಶಿಕ್ಷಕರು ನಡೆ-ನಿಲ್ಲು-ನುಡಿ ಎಂದು ಹೇಳಿದ ತಕ್ಷಣ ವಿದ್ಯಾರ್ಥಿಗಳು ಅದರಂತೆ |

| | | | | |
|---|---|---|---|---|
| | | ನಿರ್ದೇಶನಗಳನ್ನು ಸರಿಯಾಗಿ ಆಲಿಸಿ ಸ್ಪಷ್ಟವಾಗಿ ಅರ್ಥಮಾಡಿಕೊಳ್ಳುತ್ತಾರೆ. | 2.2 ವಾಕ್ಯ ಕೇಳು-ವ್ಯಾಕರಣ ಹೇಳು<br>2.3 ಗಮನವಿಟ್ಟು ಕೇಳು | ಮಾಡಬೇಕು. ನಿಂತಾಗ ಶಿಕ್ಷಕರು ನುಡಿ ಒತ್ತಕ್ಷರ ಎನ್ನಬೇಕು ಆಗ ವಿದ್ಯಾರ್ಥಿಯು ತಮ್ಮ ಎದುರಿಗೆ ನಿಂತಿರುವವರೊಂದಿಗೆ ಒಂದು ಒತ್ತಕ್ಷರ ಪದವನ್ನು ಹಂಚಿಕೊಳ್ಳಬೇಕು. ಶಿಕ್ಷಕರು ನುಡಿ ಗುಣಿತಾಕ್ಷರ ಎಂದಾಗ ಕೇವಲ ಗುಣಿತಾಕ್ಷರ ಹೊಂದಿರುವ ಪದವನ್ನು, ನುಡಿ ನಾಲ್ಕಕ್ಷರ ಎಂದಾಗ ನಾಲ್ಕು ಅಕ್ಷರ ಒಳಗೊಂಡ ಪದ ಹೇಳಬೇಕು. ಹೀಗೆ ವಿಭಿನ್ನ ಪದರಚನೆಗೆ ಸೂಕ್ತ ನಿರ್ದೇಶನ ನೀಡಿ ಚಟುವಟಿಕೆ ಮುಂದುವರೆಸಬಹುದು.<br>2.2 ರಾಮನು ಕಾಡಿಗೆ ಹೋದನು … ಈ ವಾಕ್ಯದಲ್ಲಿ ಇರುವ ರೂಢನಾಮ ಯಾವುದು? ಇಂತಹ ಪ್ರಶ್ನೆ ಕೇಳಿ. ಮಗು ವಾಕ್ಯದಲ್ಲಿ ಇರುವ ಪದಗಳನ್ನು ಆಲಿಸಿ ರೂಢನಾಮ ಗುರುತಿಸಿ ಹೇಳಲು ಪ್ರೇರೇಪಿಸಿ. ಹೀಗೆ ವಿಭಿನ್ನ ವ್ಯಾಕರಣಾಂಶ ಒಳಗೊಂಡ ವಾಕ್ಯಗಳನ್ನು ನೀಡಿ ಚಟುವಟಿಕೆ ಮುಂದುವರೆಸಿ.<br>2.3 ಸೂರ್ಯ, ಚಂದ್ರ, ದಿನಕರ, ಭಾನು – ಈ ಪದಗಳಲ್ಲಿ ಗುಂಪಿಗೆ ಸೇರದ ಪದ ಯಾವುದೆಂದು ಹೇಳಲು ಸೂಚಿಸಿ. ಇದೇ ರೀತಿ ಸಜಾತಿ-ವಿಜಾತಿ ಒತ್ತಕ್ಷರ ಪದ, ವಿರುದ್ಧಾರ್ಥಕ ಪದಗಳಿಗೆ ಸಂಬಂಧಿಸಿದಂತೆ ಪದಗಳನ್ನು ನೀಡಿ ಗುಂಪಿಗೆ ಅನ್ವಯಿಸದ ಪದ ಗುರುತಿಸಲು ಹೇಳಿ |
| 3 | | ಆಲಿಸಿದ ವಿಷಯವನ್ನು ಅನುಕರಿಸಿ ಯಥಾವತ್ತಾಗಿ ಹೇಳುತ್ತಾರೆ. | 3.1 ಆಲಿಸು-ಅನುಕರಿಸು<br>3.2 ಕೇಳು ಕಂದ- ಹೇಳು ಚೆಂದ<br>3.3 ಹಾಡೊಂದು ನಾ ಹಾಡುವೆನು | 3.1 ಟಗರಿಗೆ ತರಗು ಹಾಕು, ಕರಿ ಕೋಣ ಬಲು ಜಾಣ, ಸಂಪಗಪ್ಪನ ಮಗ ಮರಿ ಸಂಪಗಪ್ಪ ಮುಂತಾದ ಪದ ಪುಂಜಗಳನ್ನು ಕೇಳಿಸಿ ಯಥಾವತ್ತಾಗಿ ಅನುಕರಿಸಿ ಹೇಳಲು ಸೂಚಿಸಿ<br>3.2 ಧ್ವನಿಮುದ್ರಿಕೆ ಬಳಸಿ ಸರಳ ಸಂಭಾಷಣೆ ಕೇಳಿಸಿ ಅದರಂತೆ ಮತ್ತೆ ಪುನರುಚ್ಚರಿಸುವಂತೆ ಮಕ್ಕಳಿಗೆ ಹೇಳಿಸಿ<br>3.3 ಸಿನಿಮಾಗಳ ಸದಭಿರುಚಿ ಹಾಡು ಕೇಳಿಸಿ ಅದರಂತೆ ರಾಗವಾಗಿ ಹಾಡಿಸಿ. (ಮಗು ಈಗಾಗಲೇ ಕಲಿತಿರುವ ಹಾಡನ್ನು ಹೇಳಿಸಬಹುದು) |

| | | | | |
|---|---|---|---|---|
| 4 | ಸೂಕ್ತ ಸ್ವರಭಾರಗಳೊಂದಿಗೆ ನಿರರ್ಗಳವಾಗಿ ಮಾತನಾಡುವರು | ನೋಡಿದ/ ಕೇಳಿದ ಸನ್ನಿವೇಶ/ ಘಟನೆಯ ಕುರಿತು ತಮ್ಮದೇ ಮಾತುಗಳಲ್ಲಿ ವಿವರಿಸುತ್ತಾರೆ. | ಇದ್ದದ್ದು ಇದ್ದಂಗೆ…<br>4.2 ದಿನಚರಿ –ಹೇಳು ಮರಿ<br>4.3 ಪ್ರವಾಸದ ರಸಾನುಭವ | 4.1 ಊರ ಜಾತ್ರೆ, ಹಬ್ಬ ಹರಿದಿನ, ಪ್ರವಾಸದ ಅನುಭವ ಮುಂತಾದ ವಿಚಾರಗಳನ್ನು ತನ್ನ ಮಾತಿನಲ್ಲಿ ವಿವರಿಸಲು ಹೇಳಿ<br>4.2 ಬೆಳಗಿನಿಂದ ಸಂಜೆಯವರೆಗೆ ತಾನು ಕಳೆದ ಸಮಯದಲ್ಲಿ ಮಾಡಿದ ಚಟುವಟಿಕೆಗಳ ಕುರಿತು ಸರಳವಾಗಿ ಹೇಳಲು ತಿಳಿಸಿ |
| 5 | | ಸರಳ ಪರಿಚಿತ ವಿಷಯಗಳ ಕುರಿತು ನಿರರ್ಗಳವಾಗಿ ಮಾತನಾಡುತ್ತಾರೆ | 5.1 ಮಾತು-ಕತೆ<br>5.2 ಸಂವಾದ<br>5.3 ಆಶುಭಾಷಣ | 5.1ಶಾಲೆಯಲ್ಲಿ/ಊರಿನಲ್ಲಿ  ನಡೆದ ಯಾವುದಾದರೂ ಕಾರ್ಯಕ್ರಮದ ಕುರಿತು ಮಕ್ಕಳಿಂದ ಮಾತನಾಡಿಸಿ<br>5.2 ಆನ್ಲೈನ್ ಶಿಕ್ಷಣ, ಸ್ವಚ್ಛ ಪರಿಸರ ಮುಂತಾದ ವಿಷಯಗಳ ಬಗ್ಗೆ ಸಂವಾದ ಏರ್ಪಡಿಸಿ ಮಕ್ಕಳು ವಿಷಯದ ಕುರಿತು ಮಾತನಾಡಲು ಪ್ರೇರೇಪಿಸಿ |
| 6 | ಕೊಟ್ಟಿರುವ ವಿಷಯದ ಬಗ್ಗೆ ಆಲೋಚಿಸಿ ನಿರರ್ಗಳವಾಗಿ ಮಾತನಾಡುವರು | ಚಿತ್ರದ ಸನ್ನಿವೇಶವನ್ನು ಅರ್ಥೈಸಿಕೊಂಡು ತನ್ನ ಮಾತುಗಳಲ್ಲಿ ವಿವರಿಸುತ್ತಾರೆ | 6.1 ಚಿತ್ರ ನೋಡಿ – ಮಾತನಾಡು<br>6.2 ನಿಮ್ಮ ಆಯ್ಕೆ – ನಿಮ್ಮ ಮಾತು<br>6.3 ಚರ್ಚಾ ಸ್ಪರ್ಧೆ | 6.1ಜಲಮಾಲಿನ್ಯ, ಪರಿಸರ ರಕ್ಷಣೆ, ಕೃಷಿ ಚಟುವಟಿಕೆ ಇತ್ಯಾದಿ ಬಿಂಬಿಸುವ ಚಿತ್ರಪಟ ತೋರಿಸಿ ಚಿತ್ರದ ಕುರಿತು ಮಾತನಾಡಲು ಮಕ್ಕಳಿಗೆ ಪ್ರೇರೇಪಿಸಿ<br>6.2 ಚಿತ್ರ ನೋಡಿ ಅದರಲ್ಲಿರುವ ವಸ್ತು, ವಿಚಾರಗಳನ್ನು ಗುರುತಿಸಲು ತಿಳಿಸಿ. ಆ ವಿಷಯ ಅಥವಾ ವಸ್ತುಗಳಲ್ಲಿ ಒಂದನ್ನು ಆಯ್ದು ತನ್ನ ಮಾತುಗಳಲ್ಲಿ ವಿವರಿಸಲುಹೇಳಿ. ಉದಾಹರಣೆಗೆ ಹಳ್ಳಿಯ ಪರಿಸರದ ಚಿತ್ರ ತೋರಿಸುವುದು. ಆಗ ವಿದ್ಯಾರ್ಥಿ ಗುಡಿಸಲು, ರೈತ, ಹಸು, ಎಮ್ಮೆ, ಕೋಳಿ, ಶಾಲೆ, ಕೆರೆ, ಗದ್ದೆ ಮುಂತಾದವುಗಳನ್ನು ಗುರುತಿಸುತ್ತಾನೆ. ನಂತರ  ಅವುಗಳಲ್ಲಿ ಒಂದು ವಿಷಯದ ಬಗ್ಗೆ ಮಾತನಾಡುತ್ತಾನೆ |
| 7 | | ವಿಷಯವನ್ನು ಅನ್ವಯಿಸಿ ಕಲ್ಪಿಸಿ ಮಾತನಾಡುತ್ತಾರೆ | 7.1ನಾನು ನೀನಾದರೆ..<br>7.2 ನನ್ನ ಊರು-ನನ್ನ | 7.1 ನಾನು ಹಸುವಾದರೆ, ನಾನು ಶಿಕ್ಷಕನಾದರೆ ಹೀಗೆ ಸರಳ ವಿಷಯಗಳ ಮೇಲೆ ಮಕ್ಕಳು ತಾವೇ ಆ ಸ್ಥಾನದಲ್ಲಿ ಇರುವಂತೆ ಊಹಿಸಿ ಮಾತನಾಡಲು ಪ್ರೇರೇಪಿಸಿ<br>7.2 ಮುಂದಿನ ಹತ್ತು ವರ್ಷಗಳಲ್ಲಿ ನಿಮ್ಮೂರು ಹೇಗಿರಬೇಕು? ಎಂಬುದರ ಕುರಿತು |

| | | | | |
|---|---|---|---|---|
| | | | ಕನಸು<br>7.3 ಜೀವನದ ಗುರಿ-ಸಾಧಿಸುವ ಪರಿ<br>7.4 ಕ್ರಿಯೆ ಪ್ರತಿಕ್ರಿಯೆ | ಮಾತನಾಡಲು ಪ್ರೇರೇಪಿಸಿ<br>7.4 ರಸ್ತೆಯಲ್ಲಿ ಗಾಯಗೊಂಡು ಬಿದ್ದಿರುವ ನಾಯಿ, ರಸ್ತೆ ದಾಟಲು ನಿಂತಿರುವ ವೃದ್ಧ, ಲೇಖನಿ ಇಲ್ಲದೆ ಪರದಾಡುತ್ತಿರುವ ಸಹಪಾಠಿ ಇಂತಹ ಸನ್ನಿವೇಶಗಳನ್ನು ಕಂಡಾಗ ಅವುಗಳಿಗೆ ಮಕ್ಕಳ ಪ್ರತಿಕ್ರಿಯೆ ಏನು ಎಂಬುದನ್ನು ವ್ಯಕ್ತಪಡಿಸಲು ಪ್ರೇರೇಪಿಸಿ |
| 8 | ತಮ್ಮ ಜೀವನದ ಮೇಲೆ ಪ್ರಭಾವ ಬೀರಿದ ವಿಚಾರಗಳ ಕುರಿತು ವಿವರಿಸುವರು | ಪ್ರಭಾವ ಬೀರಿದ ವ್ಯಕ್ತಿಯ ಕುರಿತು ಮೆಚ್ಚುಗೆ ವ್ಯಕ್ತಪಡಿಸುತ್ತಾರೆ | 8.1ಅಚ್ಚು-ಮೆಚ್ಚು<br>8.2 ಸಾಧಕರಿಗೊಂದು ಚಪ್ಪಾಳೆ<br>8.3 ಮೆಚ್ಚಿದವರ ಬಗ್ಗೆ ಮನಬಿಚ್ಚಿ ಮಾತನಾಡು | 8.1 ಮಕ್ಕಳು ತಾವು ಜೀವನದಲ್ಲಿ ಮೆಚ್ಚುವ ವ್ಯಕ್ತಿ ಹಾಗೂ ಮೆಚ್ಚಲು ಕಾರಣವಾದ ಅಂಶಗಳ ಬಗ್ಗೆ ಮಾತನಾಡಲು ತಿಳಿಸಿ<br>8.2 ಪ್ರಸಿದ್ಧ ಸಾಧಕರ ಸಂಕ್ಷಿಪ್ತ ಪರಿಚಯ ಮಾಡಿ, ನಂತರ ಮಕ್ಕಳಿಗೆ ಸಾಧಕರ ಜೀವನದ ಯಾವ ವಿಚಾರಗಳು ಮೆಚ್ಚುಗೆಯಾಯಿತು ಎಂಬುದರ ಬಗ್ಗೆ ಮಾತನಾಡಿಸಿ |
| 9 | | ಪ್ರಭಾವ ಬೀರಿದ ಘಟನೆ/ ಸನ್ನಿವೇಶಗಳ ಕುರಿತು ಮಾತನಾಡುತ್ತಾರೆ | 9.1 ಭಾವ-ಪ್ರಭಾವ<br>9.2 ಸಾಧನೆಯ ಗರಿ-ಜೀವನದ ಗುರಿ<br>9.3 ಮರೆಯಲಾಗದ ಕ್ಷಣ-ಹೇಳುವೆ ಈ ದಿನ | 9.1 ಮಕ್ಕಳ ಬದುಕಿನಲ್ಲಿ ಪ್ರಭಾವ ಬೀರಿದ ಘಟನೆ ಅಥವಾ ಸನ್ನಿವೇಶದ ಕುರಿತು ಮಾತನಾಡಲು ಪ್ರೇರೇಪಿಸಿ<br>9.2 ಸಾಧಕರ ಜೀವನದ ವಿಚಾರಗಳನ್ನು ಓದಿ ತಿಳಿದು ಯಾವ ವಿಚಾರ ಪ್ರಭಾವಿಸಿತು ಎಂಬುದರ ಕುರಿತು ಮಾತನಾಡಿಸಿ. ಹಾಗೂ ಯಾವ ಗುಣವನ್ನು ಬದುಕಿನಲ್ಲಿ ಅಳವಡಿಸಿಕೊಳ್ಳಲು ಬಯಸುವೆ ಎಂಬುದರ ಕುರಿತು ಹೇಳಲು ತಿಳಿಸಿ |
| 10 | ಸರಳ ಪದ ಹಾಗೂ ವಾಕ್ಯಗಳನ್ನು ಸ್ಪಷ್ಟವಾಗಿ ಅರ್ಥಪೂರ್ಣವಾಗಿ ಓದುವುದು | ಹ್ರಸ್ವಸ್ವರ, ದೀರ್ಘಸ್ವರ, ಅಲ್ಪಪ್ರಾಣ, ಮಹಾಪ್ರಾಣಗಳನ್ನು | 10.1 ಸ್ಪಷ್ಟ ಉಚ್ಚಾರ-ಓದಿಗೆ ಆಧಾರ<br>10.2 ಸ್ಮರಿಸು-ಅರಸು | 10.1 ಘನ, ಭಾವ, ಭೀಷ್ಮ ಇತ್ಯಾದಿ ಮಹಾಪ್ರಾಣ ಅಕ್ಷರ ಒಳಗೊಂಡ ಪದಗಳನ್ನು ಪಟ್ಟಿ ಮಾಡಿಸಿ. ಆ ಪದಗಳನ್ನು ಓದುವಾಗ ಬಾಯಿಗೆ ಎದುರಾಗಿ ಒಂದು ಹಾಳೆ ಇಟ್ಟು ಓದಲು ತಿಳಿಸಿ. ಮಹಾಪ್ರಾಣ ಅಕ್ಷರ ಉಚ್ಚರಿಸುವಾಗ ಹೆಚ್ಚು ಉಸಿರು ಬಳಸುವುದರಿಂದ ಹಾಳೆಯು ಅದುರುವುದನ್ನು ಗಮನಿಸಲು ಸೂಚಿಸಿ. ಈ ಮೂಲಕ ಮಹಾಪ್ರಾಣ |

| | | | | |
|---|---|---|---|---|
| | | ಸ್ಪಷ್ಟವಾಗಿ ಉಚ್ಚರಿಸುತ್ತಾರೆ | 10.3 ನಾ ಬರೆದ ವಾಕ್ಯ ನಾ ಓದುವೆ | ಅಕ್ಷರಗಳನ್ನೊಳಗೊಂಡ ಪದಗಳ ಸ್ಪಷ್ಟ ಉಚ್ಚಾರಣೆ ಅಭ್ಯಾಸ ಮಾಡಿಸಿ<br>10.2 ಒಂದು ಮಗು ತನ್ನ ನೆನಪಿನಿಂದ ಯಾವುದಾದರೂ ಒಂದು ಪದವನ್ನು ಹೇಳಿದರೆ ಉಳಿದವರು ಆ ಪದಕ್ಕೆ ಶಬ್ದಕೋಶದ ಸಹಾಯದಿಂದ ಅರ್ಥ ಹುಡುಕಿ ಓದಲು ತಿಳಿಸಿ. ಮಕ್ಕಳ ಉಚ್ಚಾರಣೆ ಗಮನಿಸಿ ಮಾರ್ಗದರ್ಶನ ನೀಡಿ |
| 11 | | ಒತ್ತಕ್ಷರ ಹಾಗೂ ಗುಣಿತಾಕ್ಷರಗಳ ವ್ಯತ್ಯಾಸ ತಿಳಿದು ಓದುತ್ತಾರೆ | 11.1ಪದ ಪಟ್ಟಿ –ಓದು ಗಟ್ಟಿ<br>11.2 ಹಾಗೊಂದು- ಹೀಗೊಂದು<br>11.3 ವ್ಯತ್ಯಾಸ ಅರಿಯೋಣ- ಒತ್ತಕ್ಷರ ಪದ ಓದೋಣ | 11.1 ಗುಣಿತಾಕ್ಷರ, ಸಜಾತೀಯ ಮತ್ತು ವಿಜಾತೀಯ ಸಂಯುಕ್ತಾಕ್ಷರಗಳುಳ್ಳ ಪದಗಳ ಪಟ್ಟಿಯನ್ನು ನೀಡಿ ಮಕ್ಕಳಿಂದ ಓದಿಸಿ, ಧ್ವನಿ ವ್ಯತ್ಯಾಸವನ್ನು ಗಮನಿಸಿ<br>11.2 ಪಾಠದಲ್ಲಿ ಬರುವ ಒತ್ತಕ್ಷರ ಪದ, ಒತ್ತಕ್ಷರ ರಹಿತ ಪದಗಳನ್ನು ಪಟ್ಟಿ ಮಾಡಿಸಿ ಓದಿಸಿ |
| 12 | | ಗದ್ಯ / ಪದ್ಯಭಾಗದ ವಾಕ್ಯಗಳನ್ನು ಅರ್ಥಪೂರ್ಣವಾಗಿ ತಪ್ಪಿಲ್ಲದೆ ಓದುತ್ತಾರೆ | 12.1 ಪಾಠ ಓದೋಣ ಭಾಷೆ ತಿಳಿಯೋಣ<br>12.2 ಪತ್ರಿಕಾ ವಾಚನ<br>12.3 ಸಂಗ್ರಹಿಸಿ ಓದು | 12.1 ಹಿಂದಿನ ತರಗತಿಯ ಯಾವದಾದರೂ ಪಾಠದ ಒಂದು ಭಾಗವನ್ನು ತಪ್ಪಿಲ್ಲದೆ ಓದಲು ಪ್ರೇರೇಪಿಸಿ<br>12.2 ಪತ್ರಿಕೆಯ ಆಯ್ದ ಭಾಗವನ್ನು ಸಂಗ್ರಹಿಸಿ ಓದಲು ಸೂಚಿಸಿ<br>12.3ಇಷ್ಟವಾದ ಹಾಡನ್ನು ಸಂಗ್ರಹಿಸಿ ಹಾಡಿನ ಸಾಹಿತ್ಯವನ್ನು ಓದಲು ತಿಳಿಸಿ |
| 13 | ಕೈಬರೆಹ ಹಾಗೂ ಮುದ್ರಿತ ವಿಷಯಗಳನ್ನು ನಿರರ್ಗಳವಾಗಿ ಓದುವರು | ಲೇಖಕರ/ಜನಪ್ರಿಯ ವ್ಯಕ್ತಿಗಳ ಕೈಬರೆಹಗಳನ್ನು ಗ್ರಹಿಸಿ ಓದುತ್ತಾರೆ | 13.1 ಲೇಖಕರ ಕೈಬರೆಹ ಓದು<br>13.2 ಬಂಧುವಿನ ಬರೆಹ<br>13.3 ನನ್ನ ಬರೆಹ ನಾನೇ | 13.1 ಲೇಖಕರ / ಜನಪ್ರಿಯ ವ್ಯಕ್ತಿಗಳ ಕೈಬರೆಹಗಳನ್ನು ಸಂಗ್ರಹಿಸಿ ಮಕ್ಕಳಿಂದ ಓದಿಸಿ<br>13.2 ಮನೆಯ ಸದಸ್ಯರ ಕೈಬರೆಹ ಸಂಗ್ರಹಿಸಿ ತರಲು ಹೇಳಿ. ತರಗತಿಯಲ್ಲಿ ಓದಿಸಿ |

| | | | | |
|---|---|---|---|---|
| | | | ಓದುವೆ | |
| 14 | | ಕೈಬರೆಹವನ್ನು ಓದಿ ಬರೆಹದ ದೋಷಗಳನ್ನು ಗುರುತಿಸುತ್ತಾರೆ | 14.1 ಅದಲು ಬದಲು ಓದುವ ಮೊದಲು<br>14.2 ಬರೆದು ಕಲಿಯಿರಿ ಓದಿ ತಿಳಿಯಿರಿ<br>14.3 ತಿದ್ದಿ ಓದು – ಓದಿ ತಿದ್ದು | 14.1 ಪಠ್ಯಪುಸ್ತಕದ ಯಾವುದಾದರೂ ಒಂದು ಭಾಗವನ್ನು ಮಕ್ಕಳಿಂದ ನಕಲು ಮಾಡಿಸಿ. ಪರಸ್ಪರ ಅದಲು ಬದಲು ಮಾಡಿ ಓದಿಸಿ. ಬರೆಹದಲ್ಲಾಗಿರುವ ತಪ್ಪು ಗುರುತಿಸಿ ಸರಿಪಡಿಸಿ ಓದಲು ಸೂಚಿಸಿ<br>14.2 ಕಪ್ಪುಹಲಗೆಯಲ್ಲಿ ವಿದ್ಯಾರ್ಥಿಗಳಿಂದ ವಿವಿಧ ಪದಗಳನ್ನು ಬರೆಸಿ. ಇತರ ವಿದ್ಯಾರ್ಥಿಗಳಿಂದ ಓದಿಸಿ<br>14.3 ಮಕ್ಕಳಿಗೆ ತಮಗೆ ಗೊತ್ತಿರುವ ಪದಗಳನ್ನು ಬರೆಯಲು ತಿಳಿಸಿ. ಬರೆದ ನಂತರ ಅದಲು ಬದಲು ಮಾಡಿ ಓದಲು ತಿಳಿಸಿ. ಬರೆಹದ ತಪ್ಪುಗಳನ್ನು ಸರಿಪಡಿಸಿ ಓದಲು ಸೂಚಿಸಿ. ನಂತರ ತಪ್ಪುಗಳನ್ನು ತಿದ್ದಿ ಬರೆಯಲು ತಿಳಿಸಿ |
| 15 | | ಮುದ್ರಿತ ವಿಷಯಗಳನ್ನು ಓದಿ ಮುಖ್ಯಾಂಶಗಳನ್ನು ಗ್ರಹಿಸುತ್ತಾರೆ | 15.1 ಓದಿ ತಿಳಿಯೋಣ<br>15.2 ಆಯ್ಕೆ ಮಾಡು ಓದಿ ನೋಡು<br>15.3 ಮದುವೆಯ ಮಮತೆಯ ಕರೆಯೋಲೆ | 15.1 ಮಕ್ಕಳಿಗೆ ಕರಪತ್ರ/ ಜಾಹಿರಾತು ಇತರೆ ಮುದ್ರಿತ ಸಾಹಿತ್ಯವನ್ನು ಓದಿ ಮುಖ್ಯಾಂಶಗಳನ್ನು ಗ್ರಹಿಸಿ ಹೇಳಲು ತಿಳಿಸಿ<br>15.2 ದಿನಪತ್ರಿಕೆಯಲ್ಲಿ ಮಕ್ಕಳಿಗೆ ಆಸಕ್ತಿ ಇರುವ ವಿಷಯವನ್ನು ಆರಿಸಿಕೊಂಡು ಓದಲು ಸೂಚಿಸಿ. ಉದಾಹರಣೆಗೆ ಕ್ರೀಡಾ ವಿಷಯ, ಕಥೆ, ಕವನ , ವಿದೇಶಿ ಸುದ್ದಿ, ವಿಜ್ಞಾನ ವಿಸ್ಮಯ ಇತ್ಯಾದಿ |
| 16 | ಸರಳ ವಾಕ್ಯಗಳನ್ನು ಓದಿದ ಬಳಿಕ ವ್ಯಾಕರಣಾಂಶಗಳನ್ನು ಗುರುತಿಸುವರು | ವಾಕ್ಯವನ್ನು ಓದಿದ ನಂತರ ಕ್ರಿಯಾಪದವನ್ನು ಗುರುತಿಸುತ್ತಾರೆ | 16.1 ಮೌನ ಓದು<br>16.2 ಒಂದು ವಾಕ್ಯ – ಹಲವು ಭಾಷಾಂಶ<br>16.3 ಪಾಠ ಓದು – | 16.1 ಭಕ್ತರು ಪ್ರಾರ್ಥನಾ ಮಂದಿರಕ್ಕೆ ಬಂದರು<br>ಸರಸ್ವತಿ ಪಾಠವನ್ನು ಓದಿದಳು<br>ಶಾಲಾ ಘಂಟೆ ಬಾರಿಸಿತು - ಈ ರೀತಿಯ ವಾಕ್ಯಗಳನ್ನು ನೀಡಿ ಮಕ್ಕಳಿಂದ ಓದಿಸಿ<br>ಕ್ರಿಯಾಪದ ಗುರುತಿಸಲು ಹೇಳಿ |

| | | | | |
|---|---|---|---|---|
| | | | ವ್ಯಾಕರಣಾಂಶ ಗುರುತಿಸು | 16.2 ವಾಕ್ಯಗಳ ಚೀಟಿಗಳನ್ನು ಡಬ್ಬದಲ್ಲಿಡುವುದು. ಪ್ರತಿ ಮಗುವೂ ಒಂದೊಂದು ಚೀಟಿ ತೆಗೆದುಕೊಂಡು ಆ ವಾಕ್ಯದಲ್ಲಿರುವ ವ್ಯಾಕರಣಾಂಶಗಳನ್ನು ಹೆಸರಿಸಲು ಸೂಚಿಸಿ. ಉದಾಹರಣೆಗೆ ರಮೇಶನು ಮರವನ್ನು ಏರಿದನು. ರಮೇಶ, ಮರ – ನಾಮಪದ, ಮರವನ್ನು- ಆಗಮಸಂಧಿ, ಅನ್ನು – ದ್ವಿತೀಯಾ ವಿಭಕ್ತಿ, ಏರು- ಕ್ರಿಯಾಪದ |
| 17 | | ನೀಡಿದ ವಾಕ್ಯಗಳನ್ನು ಸರಿ ಪಡಿಸಿ ಓದುತ್ತಾರೆ | 17.1ತಪ್ಪು ತಿದ್ದು ಮರಿ ಓದು ನೀನು ಸರಿ<br>17.2 ತಪ್ಪು –ಒಪ್ಪು<br>17.3 ದೋಷ ಸರಿಪಡಿಸಿ ಓದು | 17.1 ಆಟ/ಮೈದಾನದಲ್ಲಿ/ಆಡುತ್ತಿದ್ದಾರೆ/ಮಕ್ಕಳು/ಭಾನುವಾರದಂದು ಜಗತ್ಪ್ರಸಿದ್ಧ/ಸುಂದರವಾಗಿದೆ/ಮೈಸೂರ/ಅರಮನೆ ಈ ರೀತಿ ಪದಗಳನ್ನು ಅದಲು ಬದಲು ಮಾಡಿ ನೀಡುವುದು. ಮಕ್ಕಳು ಪದಗಳನ್ನು ಅರ್ಥಪೂರ್ಣವಾಗಿ ಜೋಡಿಸಿ ಓದಲು ತಿಳಿಸಿ<br>17.2 ಕುದುರೆಯು ನೀರನ್ನು ಕುಡಿದನು. ರಮೇಶ ಚೆನ್ನಾಗಿ ಹಾಡುತ್ತಾಳೆ … ಹೀಗೆ ತಪ್ಪಾದ ವಾಕ್ಯಗಳನ್ನು ನೀಡಿ ಸರಿಪಡಿಸಿ ಓದುವಂತೆ ಸೂಚಿಸಿ<br>17.3 ರಾಮನು ಕಡಿಗೆ ಒದನು- ಈ ರೀತಿ ಕಾಗುಣಿತ ದೋಷವಿರುವ ವಾಕ್ಯಗಳನ್ನು ನೀಡಿ ಸರಿಪಡಿಸಿ ಓದಲು ತಿಳಿಸಿ. |
| 18 | ಲೇಖನ ಚಿಹ್ನೆಗಳನ್ನು ಗಮನಿಸಿ ಅರ್ಥಪೂರ್ಣವಾಗಿ ಓದುವರು | ಲೇಖನ ಚಿಹ್ನೆಗಳನ್ನು ಗುರುತಿಸಿ ವಾಕ್ಯಗಳನ್ನು ಅರ್ಥಪೂರ್ಣವಾಗಿ ಓದುತ್ತಾರೆ. | 18.1 ಹೊಂದಿಸಿ ಬರೆ<br>18.2 ಗಮನಿಸಿ ಓದು<br>18.3 ಸಂಭಾಷಣೆ ಓದು | 18.1 ಮಿಂಚುಪಟ್ಟಿಗಳ ಮುಖಾಂತರ ಲೇಖನ ಚಿಹ್ನೆಗಳ ಪರಿಚಯ ಮಾಡಿಸುವುದು. ಲೇಖನ ಚಿಹ್ನೆಗಳ ಮಿಂಚುಪಟ್ಟಿ ನೀಡಿ ಅದನ್ನು ಲೇಖನ ಚಿಹ್ನೆಗಳ ಹೆಸರಿರುವ ಮಿಂಚುಪಟ್ಟಿಯೊಂದಿಗೆ ಹೊಂದಿಸಲು ಹೇಳುವುದು<br>18.2 ವಾಕ್ಯವೃಂದವನ್ನು ನೀಡಿ ಮಕ್ಕಳಿಗೆ ಲೇಖನ ಚಿಹ್ನೆ ಗಮನಿಸಿ ಓದಲು ಸೂಚಿಸುವುದು |
| 19 | | ವಾಕ್ಯಗಳನ್ನು ಓದಿ ಅರ್ಥೈಸಿಕೊಂಡು ಸೂಕ್ತ ಲೇಖನ ಚಿಹ್ನೆ | 19.1 ಲೇಖನ ಚಿಹ್ನೆ ಬಳಸು ಚಿನ್ನ<br>19.2 ಸಂದರ್ಭಕ್ಕೆ ತಕ್ಕ | 19.1ಲೇಖನ ಚಿಹ್ನೆ ರಹಿತ ವಾಕ್ಯವೃಂದ ನೀಡಿ ಅರ್ಥಪೂರ್ಣವಾಗಿ ಓದಲು ಅನುಕೂಲವಾಗುವಂತೆ ಲೇಖನ ಚಿಹ್ನೆ ಹಾಕಲು ಸೂಚಿಸುವುದು ಮತ್ತು ಓದಿಸುವುದು<br>19.2 ಪ್ರತಿಯೊಂದು ಲೇಖನ ಚಿಹ್ನೆಯನ್ನು ಬಳಸುವ ಸಂದರ್ಭಗಳನ್ನು ಹೇಳಿಸುವುದು. |

| | | | | |
|---|---|---|---|---|
| | | ಬಳಸುತ್ತಾರೆ | ಲೇಖನ ಚಿಹ್ನೆ<br>19.3 ಚಿಹ್ನೆಗೆ ತಕ್ಕ ವಾಕ್ಯ | ಸೂಕ್ತ ವಾಕ್ಯಗಳನ್ನು ರಚಿಸಿ ಓದಲು ತಿಳಿಸುವುದು<br>19.3 ಶಿಕ್ಷಕರು ಒಂದು ಲೇಖನ ಚಿಹ್ನೆಯ ಹೆಸರು ಹೇಳಿದಾಗ ಮಕ್ಕಳು ಆ ಚಿಹ್ನೆ ಬಳಸಿರುವ ವಾಕ್ಯವನ್ನು ಪಾಠದಲ್ಲಿ ಹುಡುಕಿ ಓದಲು ಪ್ರೋತ್ಸಾಹಿಸಿ |
| 20 | ವಾಕ್ಯವೃಂದವನ್ನು ಸರಿಯಾದ ಕ್ರಮದಲ್ಲಿ ಬರೆಯುವರು. | ಅಕ್ಷರ ಮತ್ತು ಪದಗಳ ನಡುವೆ ಸೂಕ್ತ ಅಂತರ ಕಾಪಾಡಿಕೊಂಡು ಸ್ಪಷ್ಟವಾಗಿ ಬರೆಯುತ್ತಾರೆ | 20.1ಪದ ಜೋಡಿಸು ವಾಕ್ಯ ರಚಿಸು<br>20.2 ಚಿತ್ರಕ್ಕೊಂದು ಬರೆಹ<br>20.3 ಪದಕ್ಕೊಂದು ವಾಕ್ಯ ರಚನೆ<br>20.4 ನಮ್ಮೂರ ಕಥೆ | 20.1 ಕಾಡು ಮೇಡು, ಗೆಳೆಯ, ಕರ್ನಾಟಕ, ಹಸಿರು, ರಾಜು, ಮನೆಯಿಂದ, ತಿಂದವು,ಶಾಲೆಗೆ,ನಮ್ಮ ಬಂದಳು,ದನಕರು, ನನ್ನ, ಅಲೆದಾಡುತ್ತಾ, ಬಂದರು. ದೇಶ, ಗುರುಗಳು, ಬಂದನು, ಭಾರತ, ಹೊರಟರು, ರಾಜ್ಯ, ಸುಂದರ, ಶಾಲೆ, ಪದಗಳ ಪಟ್ಟಿ ನೀಡಿ ಅವುಗಳ ಸಹಾಯದಿಂದ ಅರ್ಥಪೂರ್ಣ ವಾಕ್ಯ ರಚಿಸಲು ಹೇಳುವುದು.<br>20.2ಕಾಡು, ಶಾಲೆ, ನದಿ, ಹೊಲ ಇತ್ಯಾದಿ ಚಿತ್ರ ನೀಡಿ ಅದರಬಗ್ಗೆ ತಮಗೆ ಅನಿಸಿದ್ದನ್ನು ಬರೆಯಲು ಹೇಳುವುದು<br>20.4 ಮಕ್ಕಳು ತಮ್ಮ ಊರಿನ ಕುರಿತು ತಮಗೆ ಅನಿಸಿದ್ದನ್ನು ತನ್ನದೇ ವಾಕ್ಯಗಳಲ್ಲಿ ಬರೆಯಲು ಪ್ರೇರೇಪಿಸಿ |
| 21 | | ಕಾಗುಣಿತ ಹಾಗೂ ಒತ್ತಕ್ಷರ ಒಳಗೊಂಡ ಪದಗಳನ್ನು ಸ್ಪಷ್ಟವಾಗಿ ಬರೆಯುತ್ತಾರೆ. | 21.1 ಉಕ್ತಲೇಖನ<br>21.2 ಘೋಷವಾಕ್ಯ ಬರೆ<br>21.3 ಪದಗಳ ಆಟ ಗೆಲುವಿನ ಓಟ | 21.1 ಶಿಕ್ಷಕರು ಒತ್ತಕ್ಷರ ಪದ ಒಳಗೊಂಡ ವಾಕ್ಯಗಳನ್ನು ಉಕ್ತಲೇಖನ ನೀಡಿ ಬರೆಸುವುದು.<br>21.2 ಪರಿಸರಕ್ಕೆ ಸಂಬಂಧಿಸಿದ ಘೋಷವಾಕ್ಯಗಳನ್ನು ಬರೆಸುವುದು<br>21.3ತರಗತಿಯನ್ನು ಎರಡು ಗುಂಪುಗಳಾಗಿ ಮಾಡುವುದು. ಒಂದು ಗುಂಪು ಒತ್ತಕ್ಷರ ಪದ ಬರೆದರೆ ಮತ್ತೊಂದು ಗುಂಪು ಒತ್ತಕ್ಷರ ರಹಿತ ಪದ ಬರೆಯಲು ಹೇಳುವುದು. ಸಮಯದ ಮಿತಿ ನೀಡಿ ಬರೆಯುವ ಆಟ ಮುಗಿಸುವುದು. ಅಂತಿಮವಾಗಿ ಯಾವ ಗುಂಪಿನ ಯಾವ ವಿದ್ಯಾರ್ಥಿ ಹೆಚ್ಚು ಸರಿಯಾದ ಪದ ಬರೆದಿರುತ್ತಾರೋ ಅವರನ್ನು ವಿಜೇತರೆಂದು ಘೋಷಿಸುವುದು |
| 22 | ಸರಳ ಕ್ರಿಯಾತ್ಮಕ | ನಾಮಪದ, ಲಿಂಗ, | 22.1ಚೀಟಿ ಎತ್ತಿಕೋ | 22.1ವಿದ್ಯಾರ್ಥಿಗಳ ಸಂಖ್ಯೆಯನ್ನು ಆಧರಿಸಿ ರೂಢನಾಮ, ಅಂಕಿತನಾಮ, ಅನ್ವರ್ಥನಾಮ, |

| | | | | |
|---|---|---|---|---|
| | ನಿಯಮಗಳನ್ನು ಅರ್ಥ ಮಾಡಿಕೊಂಡು ವಾಕ್ಯ ರಚಿಸುವರು. | ವಚನ, ಕ್ರಿಯಾಪದಗಳನ್ನು ಗುರುತಿಸುತ್ತಾರೆ. | ಗುಂಪು ಸೇರಿಕೋ<br>22.2 ವಚನ ಬದಲಿಸಿ ಬರೆ<br>22.3 ಕ್ರಿಯಾಪದ ಬಳಸು ವಾಕ್ಯ ರಚಿಸು<br>22.4 ಲಿಂಗ ಅನ್ಯಲಿಂಗ | ಸರ್ವನಾಮ ಪದಗಳನ್ನು ಬರೆದ ಚೀಟಿಗಳನ್ನು ಡಬ್ಬದಲ್ಲಿ ಹಾಕುವುದು. ತರಗತಿಯ ಒಂದೊಂದು ಮೂಲೆಯನ್ನು ಒಂದೊಂದು ವಿಷಯಕ್ಕೆ ನಿಗದಿಪಡಿಸುವುದು. ವಿದ್ಯಾರ್ಥಿಗಳು ಒಬ್ಬೊಬ್ಬರಾಗಿ ಬಂದು ಚೀಟಿ ತೆಗೆದುಕೊಂಡು ನಿಗದಿಪಡಿಸಿದ ಮೂಲೆಗೆ ಹೋಗಿ ನಿಲ್ಲುವುದು. ಅಂತಿಮವಾಗಿ ತಮಗೆ ಬಂದ ಪದಗಳನ್ನು ಒಟ್ಟಾಗಿ ಬರೆಯಲು ತಿಳಿಸುವುದು. ತಪ್ಪಾದ ಆಯ್ಕೆ ಮಾಡಿದ್ದರೆ ತಿದ್ದುವುದು<br>22.4 ತರಗತಿಯನ್ನು ಎರಡು ಗುಂಪುಗಳಾಗಿ ವಿಂಗಡಿಸಿ. ಹೆಣ್ಣುಮಕ್ಕಳು ಪುಲ್ಲಿಂಗ ಪದ ಹೇಳಿದರೆ ಅದಕ್ಕೆ ಅನ್ಯಲಿಂಗ ಸ್ತ್ರೀಲಿಂಗ ರೂಪವನ್ನು ಗಂಡು ಮಕ್ಕಳು ಹೇಳುವಂತೆ ಸೂಚಿಸಿ. ಹೀಗೆ ಚಟುವಟಿಕೆ ಮುಂದುವರೆಸಿ. ಉದಾಹರಣೆಗೆ ತಂದೆ –ತಾಯಿ, ಅಣ್ಣ - ಅಕ್ಕ |
| 23 | | ವಿಭಕ್ತಿ ಮತ್ತು ಸಂಧಿ ಪದಗಳನ್ನು ತಿಳಿಯುತ್ತಾರೆ | 23.1ವಿಭಕ್ತಿಗೊಂದು ಪ್ರತ್ಯಯ<br>23.2 ಕೂಡಿಸಿ ಬರೆ<br>23.3 ಬಿಡಿಸಿ ಬರೆ<br>24.4 ವಾಕ್ಯದಲ್ಲಿ ವಿಭಕ್ತಿ – ಗುರುತಿಸಲು ಬಳಸು ಯುಕ್ತಿ | 23.1ವಿಭಕ್ತಿ ಪ್ರತ್ಯಯದಿಂದ ಕೂಡಿರುವ ಪದಗಳ ಮಿಂಚುಪಟ್ಟಿ ನೀಡುವುದು ಅವುಗಳ ಹಿಂಭಾಗದಲ್ಲಿ ಪದವು ಒಳಗೊಂಡಿರುವ ವಿಭಕ್ತಿ ಪ್ರತ್ಯ ಬರೆದು ವಿಭಕ್ತಿಯ ಹೆಸರು ಬರೆಯಲು ಹೇಳುವುದು. ನಂತರ ತರಗತಿಯಲ್ಲಿ ಒಬ್ಬೊಬ್ಬೊರಾಗಿ ಓದಲು ತಿಳಿಸುವುದು<br>23.2 ಸಂಧಿಯ ನಿಯಮಗಳನ್ನು ತಿಳಿಸಿ ಬಿಡಿಸಿರುವ ಪದಗಳನ್ನು ನೀಡಿ ಕೂಡಿಸಿ ಬರೆಸುವುದು.<br>23.3 ಸಂಧಿ ಪದಗಳನ್ನು ನೀಡಿ ಅರ್ಥಪೂರ್ಣವಾಗಿ ಬಿಡಿಸಿ ಬರೆಯಲು ತಿಳಿಸುವುದು<br>23.4 ಪಾಠದಲ್ಲಿಇರುವ ವಾಕ್ಯದಲ್ಲಿ ಇರಬಹುದಾದ ವಿಭಕ್ತಿ ಪ್ರತ್ಯಯಗಳನ್ನು ಗುರುತಿಸಿ ವಿಭಕ್ತಿಯ ಹೆಸರನ್ನು ತಿಳಿಸಲು ಸೂಚಿಸಿ |
| 24 | | ಸುಳಿವು ಪದಗಳನ್ನು ಆಧರಿಸಿ ವಾಕ್ಯ ರಚಿಸುತ್ತಾರೆ | 24.1ಪದ ನೋಡು ವಾಕ್ಯ ಬರೆ<br>24.2 ಪದಕ್ಕೊಂದು | 24.1 ರಾಮ, ರಾವಣ, ಕೊಲ್ಲು/ ಭೀಮ,ದುರ್ಯೋಧನ,ಗದೆ,ಹೋರಾಡು/ ನಾನು ಶಾಲೆ ಹೋಗು/ ನಮ್ಮ ಮನೆ ನಾಯಿ ಹೀಗೆ ಸುಳಿವು ಪದ ನೀಡಿ ಪ್ರತ್ಯಯ ಬಳಸಿ ಅರ್ಥಪೂರ್ಣ ವಾಕ್ಯ ರಚಿಸಲು ಹೇಳುವುದು |

| | | | | |
|---|---|---|---|---|
| | | | ವಾಕ್ಯ<br>24.3 ನೀನೊಂದು ಪದ ಹೇಳು ನಾನೊಂದು ವಾಕ್ಯ ಬರೆವೆ | 24.2 ಮಕ್ಕಳು ತಮಗೆ ಪರಿಚಯವಿರುವ ಪದಗಳನ್ನು ತೆಗೆದುಕೊಂಡು ಅದಕ್ಕೆ ವಾಕ್ಯ ರಚಿಸಲು ತಿಳಿಸಿ<br>24.3 ಮಕ್ಕಳನ್ನು ಎರಡು ಗುಂಪುಗಳಾಗಿ ಮಾಡಿ ಒಂದು ಗುಂಪು ಪದ ಹೇಳಿದರೆ ಮತ್ತೊಂದು ಗುಂಪು ಆ ಪದ ಬಳಸಿ ವಾಕ್ಯ ರಚಿಸಲು ಹೇಳಿಸಿ. ರಚಿಸಿದ ವಾಕ್ಯವನ್ನು ಬರೆದುಕೊಳ್ಳಲು ಸೂಚಿಸಿ |
| 25 | ವಿಷಯಾಂಶಗಳನ್ನು ಸಂಗ್ರಹಿಸಿ ಸ್ವತಂತ್ರವಾಗಿ ವಿಸ್ತರಿಸಿ ಬರೆಯುವರು | ಗಾದೆ ಮಾತುಗಳನ್ನು ಅರ್ಥಮಾಡಿಕೊಂಡು ವಿಸ್ತರಿಸಿ ಬರೆಯುತ್ತಾರೆ | 25.1 ನಾನರ್ಥ ನೀನರ್ಥ<br>25.2 ಗಾದೆಗಳ ಪದ ಬಂಧ<br>25.3 ಗಾದೆಗೊಂದು ಅರ್ಥ | 25.2 ತರಗತಿಯ ಮಕ್ಕಳನ್ನು ಎರಡು ಗುಂಪುಗಳಾಗಿ ಮಾಡಿ ಒಂದು ಗುಂಪು ಗಾದೆಯ ಅರ್ಧಭಾಗ ಹೇಳಿದರೆ ಮತ್ತೊಂದು ಗುಂಪು ಗಾದೆಯನ್ನು ಪೂರ್ಣಗೊಳಿಸುವರು. ಈ ರೀತಿ ಚಟುವಟಿಕೆ ಮುಂದುವರೆಸಿ<br>25.3 ಗಾದೆಮಾತುಗಳ ಪದಗಳನ್ನು ಬರೆದು ಕತ್ತರಿಸಿ ಡಬ್ಬದಲ್ಲಿ ಹಾಕಿ. ಮಕ್ಕಳು ಪದಗಳನ್ನು ಜೋಡಿಸಿ ಸೂಕ್ತ ಗಾದೆಗಳನ್ನು ರಚಿಸಿ ಬರೆಯಲು ಅನುಕೂಲಿಸಿ |
| 26 | | ಪತ್ರಲೇಖನದ ನಿಯಮಗಳನ್ನು ಅರಿತು ಪತ್ರಗಳನ್ನು ರಚಿಸುತ್ತಾರೆ | 26.1 ನನ್ನದೊಂದು ಅರ್ಜಿ<br>26.2 ಸಹೋದರಿಗೊಂದು ಪತ್ರ<br>26.3 ಪತ್ರ-ಪರಿಹಾರ<br>26.4 ಕುಶಲವೇ ಕ್ಷೇಮವೇ | 26.1 ಪತ್ರಲೇಖನದ ವಿವಿಧ ಹಂತಗಳನ್ನು ಮಾದರಿಗಳ ಮೂಲಕ ಪರಿಚಯಿಸುವುದು ಆರೋಗ್ಯ ಸರಿ ಇಲ್ಲ/ ಮಾವನ ಮದುವೆ/ ಕುಟುಂಬದ ಪ್ರವಾಸ/ ಗೃಹಪ್ರವೇಶ/ಊರ ಜಾತ್ರೆ ಮುಂತಾದ ಕಾರಣಗಳನ್ನು ನೀಡಿ ತರಗತಿ ಶಿಕ್ಷಕರಿಗೆ ರಜೆ ಕೋರಿ ರಜಾ ಪತ್ರಬರೆಯಲು ತಿಳಿಸಿ<br>26.2 ಪೋಸ್ಟ್‌ಕಾರ್ಡ್‌ನಲ್ಲಿ ಪರ ಊರಿನಲ್ಲಿರುವ ಸಹೋದರಿಗೆ ಪತ್ರ ಬರೆಯಲು ತಿಳಿಸಿ<br>26.3 ಊರಿನ ಸಮಸ್ಯೆಗಳ ಕುರಿತು ಗ್ರಾಮಪಂಚಾಯಿತಿ/ಪುರಸಭೆ/ ತಹಶೀಲ್ದಾರ್ ರವರಿಗೆ ಪತ್ರ ಬರೆಸಿ<br>26.4 ಊರ ಹಬ್ಬ, ಶಾಲಾ ಕಾರ್ಯಕ್ರಮದ ಕುರಿತು ಗೆಳೆಯ/ಗೆಳತಿಗೆ ಪತ್ರ ಬರೆಯಲು ಸೂಚಿಸಿ |

| | | | | |
|---|---|---|---|---|
| 27 | | ಸರಳ ವಿಷಯಗಳ ಮೇಲೆ ಲಘುಟಿಪ್ಪಣಿ ರಚಿಸುತ್ತಾರೆ | 27.1 ಬರೆಯೋಣ ಟಿಪ್ಪಣಿ<br>27.2 ಯೋಜನಾ ಕಾರ್ಯ<br>27.3 ಪ್ರಬಂಧ ರಚನೆ | 27.1 ಸರಳ ವಿಷಯಗಳನ್ನು ನೀಡಿ ಟಿಪ್ಪಣಿ ಬರೆಯಲು ತಿಳಿಸಿ<br>27.2 ದಸರಾ ಹಬ್ಬ, ನಮ್ಮೂರ ಜಾತ್ರೆ, ಗ್ರಾಮೀಣ ಆಟಗಳು ಮುಂತಾದ ಸರಳ ವಿಷಯಗಳ ಮೇಲೆ ಮಾಹಿತಿ ಹಾಗೂ ಭಾವಚಿತ್ರ ಸಂಗ್ರಹಿಸಿ ಅಚ್ಚುಕಟ್ಟಾಗಿ ಲಘುಟಿಪ್ಪಣಿ ಬರೆಯಲು ತಿಳಿಸಿ<br>27.3 ಆಯ್ದ ವಿಷಯಗಳ ಕುರಿತು ಸರಳ ಪ್ರಬಂಧ ರಚಿಸಲು ತಿಳಿಸಿ |
| 28 | ಪದ ಸಂಪತ್ತು ಮತ್ತು ಬರೆಹದಲ್ಲಿ ಸೃಜನಾತ್ಮಕತೆ ತೋರ್ಪಡಿಸುವುದು | ಪಠ್ಯದಲ್ಲಿ ಬಳಕೆಯಾಗಿರುವ ಸಮಾನಾರ್ಥಕ ಪದ ಮತ್ತು ವಿರುದ್ಧಾರ್ಥಕ ಪದ, ಗ್ರಾಂಥಿಕ ರೂಪ ಗುರುತಿಸಿ ಬರೆಯುತ್ತಾರೆ | 28.1 ಹುಡುಕಿ ಬರೆ<br>28.2 ಆಡು ಮಾತು – ಗ್ರಂಥ ರೂಪ<br>28.3 ಸವಾಲು-ಜವಾಬು<br>28.4 ನೋಡಿದ್ದು - ಕೇಳಿದ್ದು | 28.1 ಹಿಂದಿನ ತರಗತಿಯ ಗದ್ಯಭಾಗವನ್ನು ನೀಡಿ ಪಠ್ಯವನ್ನು ಓದಿ ಹೊಸಪದಗಳಿಗೆ ಸಮಾನಾರ್ಥಕ ಪದ, ವಿರುದ್ಧಾರ್ಥಕ ಪದಗಳನ್ನು ಬರೆಸಿ.<br>28.2 ಆಡು ಭಾಷೆಯ ಪದಗಳನ್ನು ಮಕ್ಕಳಿಂದ ಹೇಳಿಸಿ ಪಟ್ಟಿ ಮಾಡಿಸುವುದು. ಅವುಗಳಿಗೆ ಗ್ರಾಂಥಿಕ ರೂಪ ಬರೆಯಲು ತಿಳಿಸಿ<br>28.3 ತರಗತಿಯನ್ನು ಎರಡು ಗುಂಪು ಮಾಡುವುದು. ಒಂದು ಗುಂಪು ಪದ ಹೇಳಿದರೆ ಮತ್ತೊಂದು ಗುಂಪು ಅದರ ಅರ್ಥ ಹುಡುಕಿ ಹೇಳಲು ತಿಳಿಸಿ<br>28.4 ಮಕ್ಕಳು ಜಾತ್ರೆ, ಹಬ್ಬ ಪ್ರವಾಸ ಇವುಗಳಲ್ಲಿ ನೋಡಿದ/ಕೇಳಿದ ಸಂಗತಿಗಳ ಕುರಿತು ಬರೆಯಲು ತಿಳಿಸಿ |
| 29 | | ಅನುಕರಣಾವ್ಯಯ, ದ್ವಿರುಕ್ತಿ, ಜೋಡುನುಡಿಗಳ ನಡುವಿನ ವ್ಯತ್ಯಾಸ ಅರಿಯುತ್ತಾರೆ | 29.1 ಉಲಿ-ನಲಿ<br>29.2 ಚಾರ್ಟ್ ತಯಾರಿಕೆ<br>29.3 ಪದ ವರ್ಗೀಕರಣ | 29.1 ಪ್ರಾಣಿ ಪಕ್ಷಿಗಳ ಧ್ವನಿ ಅನುಕರಿಸಲು ಹೇಳಿ. ಧ್ವನಿಗೆ ತಕ್ಕ ಬರೆಹ ರೂಪ ನೀಡಲು ತಿಳಿಸಿ. ಉದಾಹರಣೆಗೆ ಕೋಗಿಲೆಯ ಕೂಗು ಕುಹೂ ಕುಹೂ, ಪಕ್ಷಿಗಳ ಧ್ವನಿ ಚಿಲಿಪಿಲಿ ಹೀಗೆ ಎಲ್ಲಾ ಪದಗಳನ್ನು ಪಟ್ಟಿ ಮಾಡಿ ಅನುಕರಣಾವ್ಯಯವನ್ನು ಅರ್ಥೈಸಿ<br>29.2 ಅನುಕರಣಾವ್ಯಯ, ಜೋಡುನುಡಿ, ದ್ವಿರುಕ್ತಿ ಪದಗಳನ್ನು ಪಟ್ಟಿ ಮಾಡಿ ಚಾರ್ಟ್ ತಯಾರಿಸಲು ಹೇಳಿ<br>29.3 ಅನುಕರಣಾವ್ಯಯ,ಜೋಡುನುಡಿ,ದ್ವಿರುಕ್ತಿ ಪದಗಳ ಮಿಂಚುಪಟ್ಟಿ ತಯಾರಿಸಿ |

| | | | | |
|---|---|---|---|---|
| | | | | ಡಬ್ಬದಲ್ಲಿ ಹಾಕಿ ವಿದ್ಯಾರ್ಥಿಯು ತನಗೆ ಸಿಕ್ಕ ಮಿಂಚುಪಟ್ಟಿ ಓದಿ ವರ್ಗೀಕರಿಸಲು ಸೂಚಿಸಿ. ಉದಾಹರಣೆಗೆ ಬೆಟ್ಟಗುಡ್ಡ – ಇದು ಜೋಡುನುಡಿ ಎಂದು ಮಗು ಓದಿ ಕಪ್ಪುಹಲಗೆ ಮೇಲೆ ಜೋಡುನುಡಿ ಪಟ್ಟಿಯ ಕೆಳಗೆ ಬರೆಯುವನು |
| 30 | | ಗಳಿಸಿದ ಪದಸಂಪತ್ತನ್ನು ಸೃಜನಶೀಲವಾಗಿ ಬಳಸುತ್ತಾರೆ | 30.1 ಓಲೆ-ಕರೆಯೋಲೆ<br>30.2 ಆಶಯ ಶುಭಾಶಯ<br>30.3 ಜಾಹಿರಾತು ಪತ್ರ ರಚನೆ<br>30.4 ಕರಪತ್ರ ರಚನೆ | 30.1 ನಿಮ್ಮ ಮನೆಯಲ್ಲಿ ಶುಭಸಮಾರಂಭ ನಡೆಯುತ್ತದೆ ಎಂದು ಭಾವಿಸಿ ಒಂದು ಆಕರ್ಷಕ ಆಮಂತ್ರಣ ಪತ್ರಿಕೆ ರಚಿಸಿ ಎಂದು ಮಕ್ಕಳಿಗೆ ಸೂಚಿಸುವುದು.<br>30.2 ಶುಭಾಶಯ ಪತ್ರ ರಚಿಸುವುದು<br>30.4 ತಮ್ಮ ಶಾಲೆಯ ವಿಶೇಷತೆಗಳನ್ನು ವಿವರಿಸುವ ಕರಪತ್ರ ರಚಿಸಲು ಮಾರ್ಗದರ್ಶನ ನೀಡಿ |